ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
Karnataka State Road Transport Corporation
Recruitment Section (ನೇಮಕ ಶಾಖೆ)

ಸಂಖ್ಯೆ:ಕರಾಸಾ/ಕೇಕ/ನೇಮಕ/ಸಿ-2/1381/18-19 ದಿನಾಂಕ: 20-02-2019.

**ಪತ್ರಿಕಾ ಪ್ರಕಟಣೆ**

ವಿಷಯ: ದರ್ಜೆ-03 ಮೇಲ್ವಿಚಾರಕೇತರ ವರ್ಗದ ವಿವಿಧ ವೃಂದದ ಹುದ್ದೆಗಳ ಸಂಭವನೀಯ ಆಯ್ಕೆ ಪಟ್ಟಿ ಪ್ರಕಟಿಸಿರುವ ಕುರಿತು.
ಉಲ್ಲೇಖ: ಜಾಹೀರಾತು ಸಂಖ್ಯೆ 1/2016 & 2/2016 ದಿನಾಂಕ: 6-1-2016.

-----

ಉಲ್ಲೇಖಿತ ಜಾಹೀರಾತಿಗಳನ್ವಯ ದರ್ಜೆ-03 ಮೇಲ್ವಿಚಾರಕೇತರ ವರ್ಗದ ವಿವಿಧ ವೃಂದಗಳ ಪೈಕಿ ಸಹಾಯಕ ಸಂಚಾರ ನಿರೀಕ್ಷಕ, ಸಹಾಯಕ ಲೆಕ್ಕಿಗ, ಅಂಕಿ-ಅಂಶ ಸಹಾಯಕ, ಸಹಾಯಕ ಉಗ್ರಣಾ ರಕ್ಷಕ & ತಾಂತ್ರಿಕ ಸಹಾಯಕ ಹುದ್ದೆಗಳ ಸಂಭವನೀಯ ಆಯ್ಕೆಪಟ್ಟಿಗಳನ್ನು ಹಾಗೂ ಹುದ್ದೆವಾರು ಕಟ್-ಆಫ್ ಪಟ್ಟಿಗಳನ್ನು ದಿನಾಂಕ 20.02.2019 ರಂದು ಸಂಸ್ಥೆಯ ಸೂಚನಾ ಫಲಕದಲ್ಲಿ ಮತ್ತು ನಿಗಮದ ವೆಬ್-ಸೈಟ್ ಆದ www.ksrtcjobs.com ನಲ್ಲಿ ಪ್ರಕಟಿಸಲಾಗಿದೆ. ಮುಂದುವರೆದಂತೆ ಕುಶಲಕರ್ಮಿ ಹುದ್ದೆಯ ಎಲ್ಲಾ ವೃತ್ತಿಗಳಿಗೆ ಸಂಭವನೀಯ ಆಯ್ಕೆಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.

ಸದರಿ ಸಂಭವನೀಯ ಆಯ್ಕೆಪಟ್ಟಿಗಳಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಆಯ್ಕೆಪಟ್ಟಿ ಪ್ರಕಟಿಸಿದ 07 ದಿನಗಳ ಅಂದರೆ ದಿನಾಂಕ: 27.02.2019 ರ ಒಳಗಾಗಿ ಪೂರಕ ದಾಖಲಾತಿಗಳೊಂದಿಗೆ ಆಕ್ಷೇಪಣೆಗಳನ್ನು ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು(ನೇಮಕ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಇ-ಮೇಲ್ ವಿಳಾಸಕ್ಕೆ cpmrct@ksrtc.org ಗೆ ಮೇಲ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ.

ಆಕ್ಷೇಪಣೆಗಳನ್ನು ಇ-ಮೇಲ್ ಮುಖಾಂತರವೇ ಸಲ್ಲಿಸುವುದು, ಇ-ಮೇಲ್ ಹೊರತುಪಡಿಸಿ ಹಾಗೂ ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು (ಸಿ & ಪ )
ಅಧ್ಯಕ್ಷರು,ಆಯ್ಕೆ ಸಮಿತಿ